ಸಿ. ಸಿ. ನಂ.- **328/2018**

ಡಿ.ಡಬ್ಲ್ಯೂ.- **1**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **24-08-2024** ರಂದು ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಟಿ ಹಸಿನಾ |
| ಗಂಡನ ಹೆಸರು - | ಅಹಮ್ಮದ್ |
| ವಯಸ್ಸು - | **38** ವರ್ಷಗಳು |
| ಉದ್ಯೋಗ - | ಗೃಹಿಣಿ |
| ವಾಸಸ್ಥಳ - | ಹೊಸಪೇಟೆ |

ಸಾಕ್ಷಿಗೆ ಕನ್ನಡ ಭಾಷೆ ಸ್ಪಷ್ಟವಾಗಿ ಗೊತ್ತಿಲ್ಲದ ಕಾರಣ ಹೆಚ್ ಅರ್ ಜೆ ವಕೀಲರನ್ನು ತರ್ಜುಮೆಗಾರನ್ನಾಗಿ ನೇಮಿಸಿ ಅವರಿಗೂ ಸಹ ಪ್ರಮಾಣ ವಚನ ಭೋದಿಸಲಾಯಿತು.

ನನಗೆ ಕನ್ನಡ ಮತ್ತು ಹಿಂದಿ ಭಾಷ್ವೆ ಗೊತ್ತಿದ್ದು ಸಾಕ್ಷಿ ಹಿಂದಿಯಲ್ಲಿ ನೀಡುವ ಹೇಳಿಕೆಯನ್ನು ಯಥಾವತ್ತಾಗಿ ಕನ್ನಡ ಭಾಷ್ವೆಗೆ ತರ್ಜುಮೆ ಮಾಡುವುದಾಗಿ ಪ್ರಮಾಣಿಕರಿಸುತ್ತೇನೆ ಎಂದು ಅವರಿಂದ ಹೇಳಿಕೆ ಪಡೆಯಲಾಯಿತು.

ಮುಖ್ಯ ವಿಚಾರಣೆ- ಆರೋಪಿ ಪರ ಶ್ರೀ ಕೆ ವಾಯ್ ವಕೀಲರಿಂದ-

ಇಖಬಾಲ ಭಾಷಾ ನನ್ನ ಅಣ್ಣನಾಗಿರುತ್ತಾನೆ. ಅವರು ನನಗೆ ಮೆಹಬೂಬ ಭಾಷಾ ಮತ್ತು ದೂರುದಾರರಿಗೆ ಪರಿಚಯ ಮಾಡಿಸಿದರು. ಮೆಹಬೂಬ ಭಾಷಾರವರು ತನ್ನ ಹೆಂಡತಿಯಾದ ದೂರುದಾರರ ಆಸ್ತಿಯನ್ನು ನನಗೆ ಕೊಡಿಸುವುದಾಗಿ ಹೇಳಿದ್ದರು. ಸದರಿ ಆಸ್ತಿ ಪ್ಲಾಟ ನಂಬರ 41 ಆಗಿದ್ದು ಅದು ಸಂಕ್ಲಾಪುರದಲ್ಲಿ ಇತ್ತು. ಮೆಹಬೂಬ ಭಾಷಾರವರು 2016 ರಲ್ಲಿ ಸಾಲವನ್ನು ನನಗೆ ಕೊಡಿಸಿದ್ದರು. ಮೆಹಬೂಬ ಭಾಷಾ ರವರು ತನ್ನ ಹೆಂಡತಿಯಾದ ದೂರುದಾರರ ಆಸ್ತಿಯನ್ನು ನನಗೆ ಮಾರಾಟ ಮಾಡಿಸಲು ರೂ. 18 ಲಕ್ಷ ಸಾಲ ಕೊಡಿಸಿದ್ದರು. ಬ್ಯಾಂಕನವರು ನಾನು ಮೋಸ ಮಾಡಿದ್ದೆನೆ ಎಂದು ನನ್ನನ್ನು ಕರೆಯಿಸಿ ಪೋಲಿಸ ಠಾಣೆಗೆ ಕರೆಸಿದ್ದರು. ಪೋಲಿಸ ಠಾಣೆಯಲ್ಲಿ ಮೆಹಬೂಬ ಭಾಷಾ, ಇಖಬಾಲ್ ಭಾಷಾ, ಬ್ಯಾಂಕಿನ ಮ್ಯಾನೇಜರ್, ಫೀಲ್ಡ ಆಫೀಸರ್ ಇದ್ದರು. ರೂ. 18 ಲಕ್ಷ ಹಣವನ್ನು ದೂರುದಾರರೆ ಬ್ಯಾಂಕಿನಿಂದ ಪಡೆದಿದ್ದರು. ಆ ವಿಷಯವನ್ನು ನಾನು ಪೋಲಿಸ ಠಾಣೆಯಲ್ಲಿ ಹೇಳಿದ್ದೆ. ಆ ಪ್ರಕರಣ ಈಗಲು ಚಾಲ್ತಿಯಲ್ಲಿ ಇದೆ. ನನ್ನ ಹೆಸರಿನಲ್ಲಿ ತೆರಿದಿದ್ದ ಖಾತೆಯ ಚೆಕ್ ಬುಕ್ ನ್ನು ಮೆಹಬೂಬ ಭಾಷಾ ರವರು ಇಟ್ಟುಕೊಂಡಿದ್ದರು.

ಸಿ. ಸಿ. ನಂ.- **328/2018**

ಡಿ.ಡಬ್ಲ್ಯೂ.- **1**

ನಾನು ಚೆಕ್ ಮೇಲೆ ಸಹಿ ಮಾಡಿರಲಿಲ್ಲ. ದೂರುದಾರರಿಂದ ಹಣವನ್ನು ಪಡೆದಿಲ್ಲ. ನನಗೆ ದೂರುದಾರರಿಂದ ಯಾವುದೆ ನೋಟಿಸ ಬಂದಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಕೆಲವು ದಾಖಲಾತಿಗಳ ಗುರುತಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು,
ಹೊಸಪೇಟೆ.

ಮಾನ್ಯ ತರ್ಜುಮೆಗಾರರ ಸಹಿ